

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಬದುಕು ಬಾಂಧವ್ಯದ ಗೊತ್ತುಗುರಿಗಳು

ಕಳೆದ ಮಂಗಳವಾರ ದಾವಣಗೆರೆಯಲ್ಲಿ ಒಂದು ಮದುವೆ ಕಾರ್ಯಕ್ರಮವಿತ್ತು. ಮದುವೆಗೆ ಗುರು-ಹಿರಿಯರನ್ನು, ಬಂಧು-ಬಾಂಧವರನ್ನು, ಆತ್ಮೀಯ ಸ್ನೇಹಿತರನ್ನೂ ಆಹ್ವಾನಿಸಿ ಮದುಮಕ್ಕಳಿಗೆ ಶುಭಾಶೀರ್ವಾದ ಬೇಡುವುದು ಪದ್ಧತಿ. ಆದರೆ ಈ ಮದುವೆಯಲ್ಲಿ ಮದುಮಕ್ಕಳ ಎದುರಿಗೆ 'ಬದುಕು-ಬಾಂಧವ್ಯ' ಎಂಬ ಒಂದು ವಿನೂತನವಾದ ಸಂವಾದಗೋಷ್ಠಿ ಏರ್ಪಾಡಾಗಿತ್ತು. ನಮ್ಮ ಸಮ್ಮುಖದಲ್ಲಿ ಇಂತಹ ಸಂವಾದವನ್ನು ಏರ್ಪಡಿಸಲು ಬಯಸಿದ್ದವರು ದಾವಣಗೆರೆಯ ಸಮಾಜಸೇವಾಕಾರ್ಯಗಳಲ್ಲಿ ಎಲ್ಲರಿಗೂ ಸುಪರಿಚಿತರಾದ ಶ್ರೀಮತಿ ಮಂಜುಳಾ ಮತ್ತು ಬಸವಲಿಂಗಪ್ಪ ದಂಪತಿಗಳು. ವರ: ಅಮೇರಿಕೆಯಲ್ಲಿ ನೆಲೆಸಿರುವ ಅವರ ಮಗ ಸಮರ್ಥ. ವಧು: ಲೋಕಸಭಾಸದಸ್ಯರಾಗಿದ್ದ ಬೀರೂರಿನ ದಿವಂಗತ ಡಿ.ಸಿ ಶ್ರೀಕಂಠಪ್ಪನವರ ಮೊಮ್ಮಗಳು ದೇವಿಕಾ. ಬೀರೂರಿಗೆ ಹೋದಾಗಲೆಲ್ಲಾ ತಾತನ ಆಣತಿಯಂತೆ ನಮ್ಮ ಬಿಡಾರಕ್ಕೆ ಅವರ ಮನೆಯಿಂದ 'ಕೋಳೂರು ಕೊಡಗೂಸಿ'ನ ಹಾಗೆ ಮೃಷ್ಟಾನ್ನವನ್ನು ಕ್ಯಾರಿಯರ್‌ನಲ್ಲಿ ತಂದುಕೊಡುತ್ತಿದ್ದ ಪುಟ್ಟಬಾಲಕಿ; ಈಗ ಭವಿಷ್ಯದ ಹೊಂಗನಸುಗಳನ್ನು ಹೊತ್ತು ಹಸೆಮಣೆಯನ್ನೇರಿ ಕುಳಿತಿದ್ದಳು. ಮಹಾಕವಿ ಕಾಳಿದಾಸನು ತನ್ನ ಶಾಕುಂತಲ ನಾಟಕದಲ್ಲಿ ಸಾಕುಮಗಳಾದ ಶಕುಂತಲೆಯು ದುಷ್ಯಂತನ ಅರಮನೆಗೆ ಹೊರಟುನಿಂತಾಗ ಗದ್ಗದಿತರಾದ ಕಣ್ವಮಹರ್ಷಿಯ ಬಾಯಲ್ಲಿ ಹೇಳಿಸಿದ "ಯಾಸ್ಯತ್ಯದ್ಯ ಶಕುಂತಲೇತಿ ಹೃದಯಂ ಸಂಸ್ಪೃಷ್ಟಮುತ್ಕಂಠಯಾ..' ಎಂಬ ಮನಮಿಡಿಯುವ ಪ್ರಸಿದ್ಧ ಶ್ಲೋಕ ನೆನಪಾಯಿತು.

ಪ್ರಾಸ್ತಾವಿಕವಾಗಿ ಮಾತನಾಡಿದ ಬಸವಲಿಂಗಪ್ಪ ತಮ್ಮ ಮದುವೆಯ ದಿನಗಳನ್ನು ನೆನೆಸಿಕೊಂಡರು. "ನನ್ನ ಮದುವೆ ಸಾಂಪ್ರದಾಯಿಕ ವಿಧಿಯಲ್ಲಿ ನಡೆಯಲಿಲ್ಲ, ಕುವೆಂಪು ಅವರು ರೂಪಿಸಿದ 'ಮಂತ್ರ ಮಾಂಗಲ್ಯ' ವಿಧಿಯಂತೆ ನಡೆಯಿತು. ಆಗಿನ ಹರಿಜನ ಮುಖಂಡರಾದ ಭರಮಸಾಗರದ ಶಾಸಕ ಡಾ। ತಿಪ್ಪೇಸ್ವಾಮಿಯವರು 'ವಿವಾಹ ಸಂಹಿತೆ'ಯನ್ನು ಬೋಧಿಸಿದರು, ವಧೂವರರು ಸಹಿ ಹಾಕುವುದರೊಂದಿಗೆ ಸರಳ ವಿವಾಹ ನೆರವೇರಿತು". ಬಸವಲಿಂಗಪ್ಪನವರ ಈ ಮಾತಿನಲ್ಲಿ ಸಂಪ್ರದಾಯಗಳನ್ನು ಕುರಿತ ಅಸಮಾಧಾನದ ಹೊಗೆ ನಿಚ್ಚಳವಾಗಿ ಕಾಣಿಸುತ್ತಿತ್ತು. ಅವರು ಹೊತ್ತಿಸಿದ ಹೊಗೆಯೇ ಸಂವಾದ ಗೋಷ್ಠಿಯ ಆರಂಭದಲ್ಲಿ ನಮ್ಮ ಮಾತುಗಳಿಗೆ ನಾಂದಿಯಾಯಿತು.

ಪುರೋಹಿತರಿಂದ ಸಂಸ್ಕೃತದಲ್ಲಿ ಮಂತ್ರ ಹೇಳಿಸಿ ಮದುವೆ ನಡೆಸುವುದು ಗೊಡ್ಡು ಸಂಪ್ರದಾಯವೆಂದು ಹೀಗಳೆಯುವುದು ಸರಿಯೇ? 'ಸಾಂಪ್ರದಾಯಿಕ ಮಂತ್ರ'ಗಳಲ್ಲಿ ಇರುವುದೇನು? 'ಮಂತ್ರ ಮಾಂಗಲ್ಯ' ದಲ್ಲಿ ಇರುವುದೇನು? ಎರಡರಲ್ಲಿರುವ ಆಶಯ ಒಂದೇನೇ ಅಥವಾ ಬೇರೆ ಬೇರೆಯೇ? ಕುವೆಂಪುರವರ 'ಮಂತ್ರಮಾಂಗಲ್ಯ'ದ ಪುಟಗಳನ್ನು ತಿರುವಿ ಹಾಕಿದರೆ ಅದು ಆರಂಭವಾಗುವುದೇ "ಓಂ ಭೂಃ, ಓಂ ಭುವಃ, ಓಂ ಸುವಃ" ಇತ್ಯಾದಿ ಸಪ್ತವ್ಯಾಹೃತಿಗಳಿಂದ ಕೂಡಿದ ಋಗ್ವೇದದ ಗಾಯತ್ರಿ ಮಂತ್ರದಿಂದ! ಅದು ಮುಕ್ತಾಯಗೊಳ್ಳುವುದೂ ಅದೇ ಋಗ್ವೇದದ 'ಸಮಾನೋ ಮಂತ್ರಸ್ಸಮಿತಿಸ್ಸಮಾನೀ' ಎಂಬ ಮಂತ್ರದಿಂದ! ಈ ಎರಡು ಮಂತ್ರಗಳ ಮಧ್ಯೆ ಬೃಹದಾರಣ್ಯಕ ಉಪನಿಷತ್ ಮತ್ತು ಶುಕ್ಲಯಜುರ್ವೇದ ಸಂಹಿತಾ ಮಂತ್ರಗಳು, ದೇವೀಸ್ತುತಿ, ಶ್ರೀ ಸೀತಾರಾಮ ಸ್ತವನ, ವಾಣೀಸ್ತವನ, ಮಹಾಲಕ್ಷ್ಮೀ ಸ್ತುತಿ, ಗುರುಸ್ತುತಿ, ಶ್ರೀ ರಾಮಕೃಷ್ಣ ಸ್ತೋತ್ರ, ಶ್ರೀ ಶಾರದಾದೇವೀ ಸ್ತೋತ್ರ - ಇತ್ಯಾದಿ ಸಂಸ್ಕೃತ ಶ್ಲೋಕಗಳನ್ನು ಕುವೆಂಪು ಕನ್ನಡಾನುವಾದದೊಂದಿಗೆ ಹೆಣೆದಿದ್ದಾರೆ. "ಸಹಸ್ರಾರು ವರ್ಷಗಳ ಕಾಲ ಯಾವ ಮೌಲ್ಯಗಳನ್ನು ಭಾರತೀಯರು ದೊಡ್ಡದು ಎಂದು ಭಾವಿಸಿ ಆರಾಧಿಸುತ್ತಾ ಬಂದಿದ್ದಾರೋ ಆ ಎಲ್ಲಕ್ಕೂ ಸಂಕೇತಗಳಾಗಿರುವ ಶಕ್ತಿಯನ್ನು ವಧೂವರರು ತಮ್ಮ ಬದುಕಿನ ಅಮೃತ ಮಹೂರ್ತದಲ್ಲಿ ಈ ಮಂತ್ರಗಳ ಮೂಲಕ, ವಿವಾಹ ಸಂಹಿತೆಯ ಪ್ರತಿಜ್ಞಾವಿಧಿಗಳ ಮುಖಾಂತರ ತಮ್ಮ ಚೇತನಕ್ಕೆ ಆಹ್ವಾನಿಸುತ್ತಾರೆ", ಆ ಮೂಲಕ ಇವುಗಳ ಆಶಯವು ವಧೂವರರ ಜೀವನವಿಧಾನವಾಗಬೇಕೆಂದು ಶ್ರೀ ಕುವೆಂಪು ಅವರೇ ವಿವರಣೆ ನೀಡಿರುತ್ತಾರೆ. ಮಂತ್ರ ಮಾಂಗಲ್ಯದಲ್ಲಿ 'ವೃತ್ತಿ ಪುರೋಹಿತನಿಗೆ ಅವಕಾಶವಿಲ್ಲ' ಎಂಬುದನ್ನು ಬಿಟ್ಟರೆ ಅಲ್ಲಿರುವ ಮಂತ್ರಗಳೆಲ್ಲವೂ ಕನ್ನಡಾನುವಾದದೊಂದಿಗೆ ಇರುವ ಸಾಂಪ್ರದಾಯಿಕ ಸಂಸ್ಕೃತ ಮಂತ್ರಗಳೇ ಆಗಿವೆ.

ಸಂಪ್ರದಾಯದ ಪ್ರಕಾರ ಹೇಳುವ ಮಂತ್ರಗಳು ಅರ್ಥವಾಗದ ಸಂಸ್ಕೃತ ಭಾಷೆಯಲ್ಲಿದ್ದ ಮಾತ್ರಕ್ಕೆ ಅವಜ್ಞೆಗೆ ಗುರಿಯಾಗಬೇಕಾಗಿಲ್ಲ; ಹೆಗ್ಗಳಿಕೆಗೂ ಕಾರಣವಾಗಬೇಕಾಗಿಲ್ಲ. ಮಂತ್ರಗಳು ಅರ್ಥವಾಗದ ಸಂಸ್ಕೃತದಲ್ಲಿರುವುದರಿಂದ ಮುಂದೆ ಮದುವೆಗಳು ಮುರಿದು ಬೀಳುತ್ತವೆ ಎಂದು ಆಪಾದಿಸಲಾಗದು. ಕನ್ನಡದಲ್ಲಿ ಅರ್ಥವಾಗುವ 'ಮಂತ್ರ ಮಾಂಗಲ್ಯ'ದಿಂದ ಮದುವೆಗಳು ಯಶಸ್ವಿಯಾಗುತ್ತವೆ ಎಂದೂ ಭಾವಿಸಲಾಗದು. ಮದುವೆಗಳು ಮುರಿದುಬೀಳುವುದಕ್ಕೆ/ಯಶಸ್ವಿಯಾಗುವುದಕ್ಕೆ ಸಂಸ್ಕೃತ ಮಂತ್ರಗಳಾಗಲೀ, ಮಂತ್ರಮಾಂಗಲ್ಯವಾಗಲೀ ಕಾರಣವಲ್ಲ. 'ಹತ್ತಿರವಿದ್ದೂ ದೂರನಿಲ್ಲುವ' ಅಹಮ್ಮಿನ ಕೋಟೆಯನ್ನು ಕಟ್ಟಿಕೊಳ್ಳುವ ಅಥವಾ ಹೊಂದಾಣಿಕೆಯನ್ನು ಮಾಡಿಕೊಳ್ಳುವ ಸತಿಪತಿಗಳ ಮನಸ್ಸೇ ಅದಕ್ಕೆ ಕಾರಣ!

ಬಾಂಧವ್ಯಕ್ಕೆ ವಿಶಾಲವಾದ ಅರ್ಥವಿದೆ. ಗಂಡು ಹೆಣ್ಣುಗಳು ಗಂಡ ಹೆಂಡಿರಾಗಿ ಬದುಕಿನ ರಥಕ್ಕೆ ಹೆಗಲು ಕೊಡುವುದೇನೋ ಸರಿಯೇ. ಆದರೆ ಅವರ ಬಾಂಧವ್ಯ ಕೇವಲ ಅವರಿಬ್ಬರ ನಡುವಿನ ಬೆಸುಗೆಯಷ್ಟೇ ಅಲ್ಲ; ಎರಡು ಮನೆತನಗಳ ಮತ್ತು ಸಮಾಜದ ನಡುವಣ ಸಂಬಂಧದ ಕೊಂಡಿ. ಸಂವಾದದಲ್ಲಿ ಭಾಗವಹಿಸಿದ್ದ ಓರ್ವ ಮಹಿಳಾ ಸಾಹಿತಿ "ಮದುವೆ ಆದ ಎರಡು ವರ್ಷಗಳು ಪ್ರೊಬೆಷನರಿ ಅವಧಿ ಇದ್ದ ಹಾಗೆ" ಎಂದು ಹೇಳಿದ್ದು ನಮ್ಮನ್ನು ದಿಗ್ಭ್ರಮೆಗೊಳಿಸಿತು. ಅದೊಂದು critical period ಎಂದು ಬೇಕಾದರೆ ಹೇಳಬಹುದು. ಪತಿ-ಪತ್ನಿಯರ ಸಂಬಂಧ

ನೌಕರಿಯಲ್ಲಿ Employer ಮತ್ತು Employee ಮಧ್ಯೆ ಇರುವ Master and Servant relationship ಅಲ್ಲ. ಕೈಹಿಡಿದ ಹೆಂಡತಿ ಗಂಡನ ಆಳಲ್ಲ. ಗಂಡನನ್ನು ಯಜಮಾನನೆಂದು ಕರೆದರೂ ಹೆಂಡತಿಯೂ ಯಜಮಾನಿತಿಯೇ. ಯಜಮಾನಿಕೆಯ ಜವಾಬ್ದಾರಿಗಳನ್ನು ಹಂಚಿಕೊಂಡು ಸಂಸಾರವನ್ನು ಮುನ್ನಡೆಸುವ ವಿಶಿಷ್ಟ ಕೌಟುಂಬಿಕ ಜಂಟಿ ಹೊಣೆಗಾರಿಕೆ ಅವರದು. ಪಾಶ್ಚಾತ್ಯ ಯುವಕ-ಯುವತಿಯರಲ್ಲಿರುವ Dating ಪದ್ಧತಿಯನ್ನು ಬೇಕಾದರೆ ಪ್ರೊಬೇಷನರಿ ಪೀರಿಯಡ್ ಎನ್ನಬಹುದು. ಆದರೆ ಮದುವೆಗೆ ಮುಂಚೆ ಗಂಡು-ಹೆಣ್ಣು ಒಟ್ಟಿಗೆ ಇರುವುದಾಗಲೀ, ಒಟ್ಟಿಗೆ ಅಡ್ಡಾಡುವುದಾಗಲೀ ನಮ್ಮ ದೇಶದ ಸಂಸ್ಕೃತಿಯಲ್ಲ.

"Man is a rational animal" ಎಂಬ ಮಾತನ್ನು ಉಲ್ಲೇಖಿಸಿದವರು ದಾವಣಗೆರೆ ವಿಶ್ವವಿದ್ಯಾನಿಲಯದ ಉಪಕುಲಪತಿ ಶ್ರೀಮತಿ ಇಂದುಮತಿಯವರು. ಆದರೆ ನಮ್ಮ ಅನುಭವಕ್ಕೆ ಬಂದ ಪ್ರಕಾರ ಹೇಳುವುದಾದರೆ ಎಷ್ಟೇ ತರ್ಕಬದ್ಧ ಆಲೋಚನೆಯನ್ನು ಮನುಷ್ಯ ಮಾಡುತ್ತಾನೆಂದರೂ ವೈವಾಹಿಕ ಬದುಕಿನಲ್ಲಿ ಪತಿ-ಪತ್ನಿ ವರ್ತಿಸುವ ರೀತಿ ಮತ್ತು ತೆಗೆದುಕೊಳ್ಳುವ ನಿರ್ಧಾರಗಳು ತರ್ಕರಹಿತವಾಗಿರುತ್ತವೆ (irrational). ಅದಕ್ಕೆ ಮುಖ್ಯ ಕಾರಣ ಅವರಲ್ಲಿರುವ 'ಅಹಂ' (ego). ಒಮ್ಮೆ ನಮ್ಮ ನ್ಯಾಯಪೀಠದ ಮುಂದೆ ವಿರಸಗೊಂಡಿದ್ದ ಯುವಸಾಫ್ಟ್‌ವೇರ್ ದಂಪತಿಗಳು ಹಾಜರಾಗಿದ್ದರು. ಅವರನ್ನು ಖಾಸಗಿಯಾಗಿ ಕೂರಿಸಿಕೊಂಡು ವಿಚಾರಿಸುವಾಗ ಇಬ್ಬರ ಮಧ್ಯೆ ಏರುದನಿಯ ವಾಕ್ಸಮರವೇ ನಡೆಯಿತು. ನಿಮ್ಮೀರ್ವರ ವಿರಸಕ್ಕೆ ಕಾರಣವಾದ ಮೊಟ್ಟ ಮೊದಲ ಘಟನೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ ಎಂದು ಹೇಳಿ ಬಿಳಿಯ ಹಾಳೆಯನ್ನು ಕೊಟ್ಟಾಗ ಅವರಿಬ್ಬರೂ ಬರೆದುಕೊಟ್ಟ ಕಾರಣಗಳು ಒಂದಕ್ಕೊಂದಕ್ಕೆ ಏನೂ ತಾಳೆ ಆಗಲಿಲ್ಲ!

ಮಂಗಳವಾರ ಮಗಳನ್ನು ಕಳುಹಿಸಬಾರದು, ಶುಕ್ರವಾರ ಸೊಸೆಯನ್ನು ಕಳುಹಿಸಬಾರದು ಎಂದು ಹೇಳುತ್ತಾರೆ. ಈ ನಂಬುಗೆಯ ಹಿಂದೆ ಏನು ಕಾರಣವಿದೆಯೋ, ಯಾವ ತಂದೆ-ತಾಯಂದಿರ, ಅತ್ತೆ-ಮಾವಂದಿರ ಕಹಿ ಅನುಭವವಿದೆಯೋ ತಿಳಿಯದು. ಆದರೆ ನಮಗಂತೂ 'ಮಂಗಳವಾರದಂದು ಮನುಷ್ಯರ ಮುಖವನ್ನೇ ನೋಡಬಾರದು' ಎನ್ನುವಷ್ಟು ಜಿಗುಪ್ಸೆಯುಂಟಾಗಿದೆ. ಅದಕ್ಕೆ ಕಾರಣ ಹಿಂದಿನ ದಿನವಾದ ಸೋಮವಾರದಂದು ನಮ್ಮ 'ಸದ್ಧರ್ಮ ನ್ಯಾಯಪೀಠ'ದ ಮುಂದೆ ಬರುವ ಜನರ ಜಗಳಗಳು! ರಕ್ತಬಸಿದು ಜನ್ಮನೀಡಿ, ಅಮೃತಮಯವಾದ ಎದೆಹಾಲನುಣಿಸಿದ ತಾಯಿಗೆ ಇಳಿವಯಸ್ಸಿನಲ್ಲಿ ಅನ್ನಹಾಕದ ಕೆಟ್ಟ ಮಕ್ಕಳು, ಒಂದೇ ತಾಯಿಯ ಎದೆಹಾಲನ್ನು ಕುಡಿದು ಬೆಳೆದರೂ ದ್ವೇಷದ ನಂಜನ್ನು ಉಗುಳುವ ಅಣ್ಣ-ತಮ್ಮಂದಿರು, ಮದುವೆಯಾದ ಮೂರೇ ತಿಂಗಳಲ್ಲಿ ಆಜನ್ಮವೈರಿಗಳಂತೆ ಹಗೆತನವನ್ನು ಸಾಧಿಸುವ ಯುವದಂಪತಿಗಳು, ಹಲವಾರು ವರ್ಷ ದಾಂಪತ್ಯಜೀವನದ ಸುಖವನ್ನು ಅನುಭವಿಸಿಯೂ ವಿವಾಹ ವಿಚ್ಛೇದನವನ್ನು ಪಡೆದು ಮುದ್ದುಮಕ್ಕಳೊಂದಿಗೆ ಹೆಂಡತಿಯನ್ನು ನರಕಕ್ಕೆ ತಳ್ಳುವ ಕ್ರೂರಿ ಗಂಡ, ಸ್ನೇಹವಿಶ್ವಾಸದಲ್ಲಿ ಪಡೆದ ಹಣವನ್ನು ಹಿಂತಿರುಗಿಸದೆ 'ಏನು ಮಾಡಿಕೊಳ್ಳುತ್ತೀಯಾ ಮಾಡಿಕೋ ಹೋಗು' ಎಂದು ಆಪತ್ಕಾಲದಲ್ಲಿ ನೆರವಾದವನನ್ನೇ ದಬಾಯಿಸುವ ಕೃತಘ್ನ ಸ್ನೇಹಿತ!... ಒಂದೇ, ಎರಡೇ. ಏನಿದು ಬದುಕು, ಎಲ್ಲಿದೆ ಬಾಂಧವ್ಯ? ಕಡುವೈರಿಗಳಂತೆ ವರ್ತಿಸುವ ಈ ಜನರ ಹೃದಯದಲ್ಲಿ ಬಾಂಧವ್ಯದ ಹಾಲುಜೇನುಗಳಿಲ್ಲ; ಇರುವುದೆಲ್ಲಾ ಹಾಲಾಹಲ ವಿಷ!

"Marriages are made in Heaven!" (ಮದುವೆಗಳು ಸ್ವರ್ಗದಲ್ಲಿ ಆಗುತ್ತವೆ) ಎನ್ನುತ್ತಾರೆ. ಆದರೆ ಅದು ಈಗ ಬದಲಾಗಿ "Marriages end in Hell!" (ಮದುವೆಗಳು ನರಕದಲ್ಲಿ ಕೊನೆಗೊಳ್ಳುತ್ತವೆ) ಎನ್ನುವಂತಾಗಿವೆ. ದಾಂಪತ್ಯದ ಬದುಕಿನಲ್ಲಿ ಅತಿ ಮುಖ್ಯವಾಗಿ ಬೇಕಾಗಿರುವುದು ಪರಸ್ಪರರಲ್ಲಿನ ಪ್ರೀತಿ. 'ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ?" ಎನ್ನುತ್ತಾರೆ ರಾಷ್ಟ್ರಕವಿ ಜಿ.ಎಸ್.ಎಸ್. ಪ್ರೀತಿ ಇದ್ದರೆ ಏನಿಲ್ಲದಿದ್ದರೂ ನಡೆದೀತು. ಅದಿಲ್ಲದಿದ್ದರೆ ಏನೆಲ್ಲ ಇದ್ದರೂ ಬದುಕು ನರಕವೇ ಸರಿ!

21.6.2012

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑